# Admission of deaf and dumb children in normal school

ಕನ್ನಡಪ್ರಭ

**ಶಿಕ್ಷಣವೇ ಶಕ್ತಿ.. ಈ ಮಕ್ಕಳಿಗಿನ್ನು ವಿಶೇಷ ಶಾಲೆಯ ಅಗತ್ಯವಿಲ್ಲ | ಸಾಮಾನ್ಯ ಮಕ್ಕಳ ಜೊತೆಯೇ ಕಲಿಕೆ: 450 ಶಾಲೆಗಳಲ್ಲಿ ಪ್ರಯೋಗ ಯಶಸ್ವಿ**

## ಕಿವುಡ-ಮೂಕ ಮಕ್ಕಳಿಗೂ ಸಾಮಾನ್ಯ ಶಾಲೆಗಳಲ್ಲಿ ಪ್ರವೇಶ

• **ಕಾವೇರಿ ಎಸ್.ಎಸ್.** ಬೆಂಗಳೂರು

ಶ್ರವಣದೋಷವುಳ್ಳ ಹಾಗೂ ಮಾತು ಬಾರದ ಮಕ್ಕಳೂ ಇನ್ನು ಮುಂದೆ ಸಾಮಾನ್ಯ ಶಾಲೆಗಳಲ್ಲಿ ಶಿಕ್ಷಣ ಪಡೆಯಬಹುದು!

ಇಂತಹದೊಂದು ಬಯಕೆಯನ್ನು ವಾಸ್ತವಗೊಳಿಸುವ ವಿನೂತನ ಪ್ರಯತ್ನ ಆರಂಭಗೊಂಡಿದ್ದು, ರಾಜ್ಯದ ಆಯ್ದ ಜಿಲ್ಲೆಗಳ ಸರ್ಕಾರಿ ಶಾಲಾ ಶಿಕ್ಷಕರು ಹಾಗೂ ಕೆಲ ಖಾಸಗಿ ಶಾಲಾ ಶಿಕ್ಷಕರಿಗೆ ಕಿವಿ ಕೇಳದ ಹಾಗೂ ಮಾತು ಬಾರದ ಮಕ್ಕಳಿಗೆ ಶಿಕ್ಷಣ ನೀಡುವ ಕುರಿತಂತೆ ತರಬೇತಿ ನೀಡಲಾಗಿದೆ. ಈಗಾಗಲೇ ತರಬೇತಿ ಪಡೆದ ಶಿಕ್ಷಕರಿರುವ 450 ಶಾಲೆಗಳಲ್ಲಿ ಶ್ರವಣದೋಷ ಹಾಗೂ ಮಾತು ಬಾರದ 1000 ಮಕ್ಕಳು ಪ್ರವೇಶ ಪಡೆದು ಶಿಕ್ಷಣ ಪಡೆಯುತ್ತಿದ್ದಾರೆ.

'ಅಸೋಸಿಯೇಷನ್ ಆಫ್ ಪೀಪಲ್ ವಿತ್ ಡಿಸೇಬಿಲಿಟೀಸ್' (ಎಪಿಡಿ) ಯುಕೆಯ 'ಡಫ್ ಚೈಲ್ಡ್ ವರ್ಲ್ಡ್ ವೈಡ್ (ಡಿಸಿಡಬ್ಲ್ಯು)ನ 'ದಿ ಬಿಗ್ ಲಾಟರಿ ಫಂಡ್'ನ ಅನುದಾನದಡಿ 2012ರ ಜೂನ್‌ನಿಂದ 2016ರ ಮೇ ವರೆಗೆ 'ಕಿವುಡ ಮಕ್ಕಳಿಗೆ ಪ್ರಾಥಮಿಕ ಶಿಕ್ಷಣ; ಮಾದರಿ ಶಾಲಾ ಚಿಂತನೆ' ಎಂಬ



ಯೋಜನೆಯನ್ನು ಚಿಕ್ಕಬಳ್ಳಾಪುರ, ವಿಜಯಪುರ, ದಾವಣಗೆರೆ ಜಿಲ್ಲೆಗಳಲ್ಲಿ ಕೈಗೊಳ್ಳಲಾಗಿತ್ತು.

ಈ ಯೋಜನೆಯ ಮೌಲ್ಯೀಕರಣವನ್ನು ಇನ್‌ಸ್ಟಿಟ್ಯೂಟ್ ಆಫ್ ಹೆಲ್ತ್ ಮ್ಯಾನೇಜ್‌ಮೆಂಟ್ ರೀಸರ್ಚ್ (ಐಐಎಚ್‌ಎಂಆರ್) ಇತ್ತೀಚೆಗೆ ನಡೆಸಿದೆ. ಇದರಲ್ಲಿ ಮಕ್ಕಳಲ್ಲಿ ಸಂವಹನ ಮತ್ತು ಸಾಮಾಜಿಕ ಕೌಶಲ್ಯಗಳಲ್ಲಿ ಸುಧಾರಣೆ, ವಯಸ್ಸು ಮತ್ತು ವರ್ಗಮಟ್ಟದ ಸಾಕ್ಷರತೆ ಮತ್ತು ಅಂಕಿ ಲೆಕ್ಕಾಚಾರ ಕೌಶಲ್ಯಗಳಲ್ಲಿ ಉತ್ತಮ ಸಾಧನೆಯನ್ನು ಗುರುತಿಸಲಾಗಿದೆ. ನಾಲ್ಕು ವರ್ಷದ ಪ್ರಾಜೆಕ್ಟ್‌ನಲ್ಲಿ 790 ಶ್ರವಣ ದೋಷವುಳ್ಳ ಮಕ್ಕಳನ್ನು ಶಾಲೆಗೆ ಪ್ರವೇಶ ಕಲ್ಪಿಸುವುದು, ಸಮುದಾಯ ಆಧರಿತ ಪುನರ್‌ವಸತಿ ಕಾರ್ಯಗಳೆಡೆ ಗಮನ ಕೇಂದ್ರೀಕರಿಸಲಾಗಿತ್ತು.

**ಪೋಷಕರಿಂದ ಶಿಕ್ಷಕರವರೆಗೆ ತರಬೇತಿ!:** ಆಯ್ದ 3 ಜಿಲ್ಲೆಗಳಲ್ಲಿ ಸಮುದಾಯದ ಪ್ರತಿಯೊಬ್ಬರನ್ನೂ ಪರಿಗಣನೆಗೆ ತೆಗೆದುಕೊಂಡು ಜಾಗೃತಿ ಮೂಡಿಸಲಾಗಿದೆ. ಜತೆಗೆ ಪೋಷಕರು, ಶಿಕ್ಷಕರಲ್ಲಿ ಸಂಜ್ಞಾ ಭಾಷಾ ತರಬೇತಿ, ಅಂಗವೈಕಲ್ಯ, ಕೌಶಲ್ಯಾಭಿವೃದ್ಧಿ, ಪ್ರಾಥಮಿಕ ಶಿಕ್ಷಣ ಕುರಿತಂತೆ ತರಬೇತಿ ಜತೆಗೆ ಸರ್ಕಾರಿ ಸೌಲಭ್ಯಗಳನ್ನೂ ಮನೆಬಾಗಿಲಿಗೆ ತಲುಪಿಸುವ ಕಾರ್ಯವಾಗಿದೆ. ಈ ಪ್ರಾಜೆಕ್ಟ್‌ನಲ್ಲಿ 21 ಮಂದಿ ಎಪಿಡಿ ಸಿಬ್ಬಂದಿ, ಸಂಜ್ಞಾ ಭಾಷಾ ತಜ್ಞರು, 800 ಸರ್ಕಾರಿ ಶಿಕ್ಷಕರು ತೊಡಗಿಸಿಕೊಂಡಿದ್ದರು. 3500ರಿಂದ 4000 ಸಹಪಾಠಿ ಮಕ್ಕಳಿಗೆ ಭಾರತೀಯ ಸಂಜ್ಞಾಭಾಷೆ ಭಾಷಾ ಸಾಮರ್ಥ್ಯದ ಮೂಲ ವಿಷಯಗಳಲ್ಲಿ ತರಬೇತಿ ನೀಡಲಾಗಿದೆ. ಈ ಜಿಲ್ಲೆಗಳ ಶೇ.96ರಷ್ಟು ಶ್ರವಣದೋಷವುಳ್ಳ ಮಕ್ಕಳು ಇತರೆ ಮಕ್ಕಳೊಂದಿಗೆ ಕೂತು ಶಿಕ್ಷಣ ಪಡೆಯಲು ಅನುಕೂಲವಾಗಿದೆ ಎನ್ನುತ್ತಾರೆ ಐಐಎಚ್‌ಎಂಆರ್ ಅಧಿಕಾರಿಗಳು. ಕಳೆದ 4 ವರ್ಷದಲ್ಲಿ ಯಶಸ್ವಿಯಾದ ಈ ಯೋಜನೆಯನ್ನು ಇತರ ಜಿಲ್ಲೆಗಳಲ್ಲೂ ವಿಸ್ತರಿಸಲು ನಿರ್ಧರಿಸಲಾಗಿದೆ.

### ಸಮಾನ ಶಿಕ್ಷಣ

ಮಾದರಿ ಶಾಲಾ ಚಿಂತನೆಯಡಿ ಸಂಜ್ಞಾ ಭಾಷಾ ತರಬೇತಿ ಸೇರಿದಂತೆ ಬೋಧನೆ, ಕಲಿಕೆ, ವಸ್ತುಗಳ ಮುದ್ರಣ-ವಿತರಣೆ, ತಂತ್ರಜ್ಞಾನ ಸಂಪರ್ಕ ಹೀಗೆ ವಿವಿಧ ತರಬೇತಿ ನೀಡಿ ಅಗತ್ಯವಿರುವ ಸೌಲಭ್ಯಗಳನ್ನೂ ಕಲ್ಪಿಸಲಾಗಿದೆ. ಇಂದು ಮೂಕ ಮಕ್ಕಳೂ ಇತರೆ ಮಕ್ಕಳೊಂದಿಗೆ ಸಮಾನ ಶಿಕ್ಷಣ ಪಡೆಯುತ್ತಿದ್ದು, ಶಾಲೆಗೆ ತೆರಳುವ ಮಕ್ಕಳ ಪ್ರಮಾಣ ಶೇ.90ರಷ್ಟು ವೃದ್ಧಿಯಾಗಿದೆ ಎನ್ನುತ್ತಾರೆ ಐಐಎಚ್‌ಎಂಆರ್ ನಿರ್ದೇಶಕಿ ಡಾ. ಉಷಾ ಮಂಜುನಾಥ್.

**ಇದೀಗ ಮಾದರಿ ಶಾಲಾ ಚಿಂತನೆ ಯೋಜನೆಯನ್ನು ಇತರೆ ಜಿಲ್ಲೆಗಳಿಗೂ ವಿಸ್ತರಿಸಲಾಗಿದೆ. ಇಂದು 2000 ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ. ರಾಜ್ಯದಲ್ಲಿ ಶೇ.60ಕ್ಕೂ ಹೆಚ್ಚು ವಿಶೇಷ ಶಾಲೆಗಳಿದ್ದರೂ ಈ ಮಕ್ಕಳಿಗೆ ಪೂರಕ ವಾತಾವರಣ ಇಲ್ಲ. ಶೇ.70ರಷ್ಟು ಮಕ್ಕಳಿಗೆ ಸಮನ್ವಯ ಶಿಕ್ಷಣ ಕಲ್ಪಿಸಬೇಕೆಂಬ ಗುರಿ ಹೊಂದಲಾಗಿದೆ.**

• **ಗುರುಪ್ರಸಾದ್**
ಸಹಾಯಕ ನಿರ್ದೇಶಕ, ಎಪಿಡಿ

Bengaluru
Page No. 6 Aug 28, 2017
Powered by: erelego.com